ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ಶಿಗ್ಗಾಂವದಲ್ಲಿ ಕೈಗಾರಿಕಾ ಸಂಕೀರ್ಣದ ಕಟ್ಟಡ ಪ್ರಾರಂಭ ಮಾಡಲಾಗಿದೆಯೆ?

ಆ) ಸದರೀ ಕಟ್ಟಡ ಯಾರಿಗೆ ಟೆಂಡರ್ ಆಗಿದೆ, ಎಷ್ಟು ಹಣಕ್ಕೆ ಆಗಿದೆ?

ಇ) ಸದರೀ ಕಟ್ಟಡವನ್ನು ಎಷ್ಟು ದಿನಗಳಲ್ಲಿ ಮುಗಿಸಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು:

ಅ) ಹೌದು

ಆ) ಸದರೀ ಕಟ್ಟಡವು ಟೆಂಡರ್ ಮುಖಾಂತರ ಶ್ರೀ ಬಂಡೀವಡ್ಡರ್, ಹಾವೇರಿ, ಎಂಬ ಗುತ್ತಿಗೆದಾರರಿಗೆ ಆಗಿರುತ್ತದೆ.

ಮಳಿಗೆ	ರೂ.
4-ಸಿ ಮಾದರಿ	11,94,498-00
4-ಸೂಪರ್ ಮಿನಿ ಮಾದರಿ	4,40,182-00
ಒಟ್ಟು ಹಣ	16,34,680-00

ಇ) 1994ರ ಜೂನ್ ತಿಂಗಳಿನಲ್ಲಿ ಪೂರ್ಣಗೊಳಿಸಲಾಗುವುದು.

ಕಾರ್ಮಿಕ ಇಲಾಖೆಯ ಐ.ಟಿ.ಐ. ಕುರಿತು

720 - ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಕೈಗಾರಿಕಾ ತರಬೇತಿ ಕೇಂದ್ರದ ಕಾಲೇಜುಗಳನ್ನು ಕಳೆದ 5 ವರ್ಷಗಳಲ್ಲಿ ಪ್ರಾರಂಭಿಸಲಾಗಿದೆ?

ಆ) ಧಾರವಾಡ ಜಿಲ್ಲಾ ಶಿಗ್ಗಾಂವ ತಾಲ್ಲೂಕಿನಲ್ಲಿ ಅಥವಾ ಸವಣೂರು ತಾಲ್ಲೂಕಿನಲ್ಲಿ ಕೈಗಾರಿಕಾ ತರಬೇತಿ ಕೇಂದ್ರದ ಕಾಲೇಜು ಪ್ರಾರಂಭ ಮಾಡಲಾಗುವುದೇ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಕಾರ್ಮಿಕ ಸಚಿವರು) :

ಅ) 14

ಆ) ಸದ್ಯಕ್ಕೆ ಇಲ್ಲ

ಆಶ್ರಯ ಯೋಜನೆ ಕುರಿತು

619 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಯನ್ನು ಕಟ್ಟಲು ಕರ್ನಾಟಕ ಗೃಹ ಮಂಡಳಿಗೆ ಹೊಡಲಾಗಿರುವುದು?

ಆ) ಸಿಓಡಿ ತನಿಖೆಯಾಗಿ ಮನೆಯನ್ನು ಕಟ್ಟುವ ಕೆಲಸ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟದೆ ಕರ್ನಾಟಕ ಗೃಹ ಮಂಡಳಿ ನಿಲ್ಲಿಸಿರುವ ಕೆಲಸಕ್ಕೆ ಸರ್ಕಾರ ಬೇರೆ ವ್ಯವಸ್ಥೆಯನ್ನು ಏನಾದರೂ ಮಾಡುವುದೇ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ ಹೆಚ್ಚುಡಿ 352 ಕೆಹೆಚ್ಚಿ 92 ದಿನಾಂಕ 8-1-92ರಲ್ಲಿ 40,000 ಆಶ್ರಯ ಮನೆಗಳನ್ನು ಪೂರ್ಣಗೊಳಿಸಲು ಕರ್ನಾಟಕ ಗೃಹ ಮಂಡಳಿಗೆ ವಹಿಸಲಾಗಿತ್ತು.

ಆ) ಇಲ್ಲ